# ಶೃಂಗದಾ ಬೆನ್ನೇರಿ ಬಂತು..



ಎಂದು ಇಬ್ಬರಿಗೂ ಅನಿಸಿದಾಗ ಮಾತ್ರ ಕೂಟಗಳು ಲೈಂಗಿಕ ಹಸಿವನ್ನು ತೀರಿಸುತ್ತವೆ.

ಲೈಂಗಿಕತೆಯ ಬಯಕೆ ಮತ್ತು ಆಸಕ್ತಿಯ ಸ್ವರೂಪ ವೈಯಕ್ತಿಕವಾದದ್ದು. ಎಲ್ಲರೂ ತಮ್ಮೊಳಗಿನ ಲೈಂಗಿಕತೆಯನ್ನು ಗುರುತಿಸಿಕೊಂಡು ಸಂಗಾತಿಯೊಡನೆ ಹಂಚಿಕೊಳ್ಳಬೇಕಾಗುತ್ತದೆ. ಎಲ್ಲರಿಗೂ ಅನ್ವಯಿಸುವಂತಹ ಪರಿಹಾರಗಳನ್ನು ಇದಕ್ಕೆ ಕೊಡಲಾಗುವುದಿಲ್ಲ. ಅಗತ್ಯವಿದ್ದಾಗ ತಜ್ಞರ ಸಲಹೆ ಪಡೆಯಬೇಕು.

**ದಾಂಪತ್ಯದಲ್ಲಿ ಪ್ರೀತಿ ಮುಖ್ಯ, ಕಾಮವಲ್ಲ ಎಂದು ಹೇಳುತ್ತಾ ಪುರುಷವರ್ಗ ಸ್ತ್ರೀಯರನ್ನು ನಾಲ್ಕು ಗೋಡೆಯ ಮಧ್ಯೆ ಬಂಧಿಸಿ ತಾನು ವಿವಾಹದ ಹೊರಗಿನ ಸಂಬಂಧಗಳನ್ನು ಮುಕ್ತವಾಗಿ ಅನುಭವಿಸುತ್ತಾ ಬಂದಿದೆ.**

### ದೇಹವೆಂಬ ದೇಗುಲ

ಕೂಟದಲ್ಲಿನ ಆನಂದ ಮನೋಮೂಲವಾದದ್ದು ಮತ್ತು ಲೈಂಗಿಕ ತೃಪ್ತಿ ಪಡೆಯಲು ದಂಪತಿಗಳ ನಡುವೆ ಆತ್ಮೀಯತೆ ಇರಬೇಕು ಎನ್ನುವುದು ನಿಜವಾದರೂ ದೇಹವನ್ನು ಸಂಪೂರ್ಣ ಕಡೆಗಣಿಸಲಾಗುವುದಿಲ್ಲ. ಸಂಗಾತಿಗಳು ಆನಂದವನ್ನು ಪರಸ್ಪರ ಹಂಚಿಕೊಳ್ಳುವುದು ದೇಹದ ಮೂಲಕವಾದ್ದರಿಂದ ದೇಹ ಒಂದು ವಾಹನದಂತೆ ಕೆಲಸಮಾಡುತ್ತದೆ. ಸಾಕಷ್ಟು ಜನರಿಗೆ ತಮ್ಮ ದೇಹದ ಬಗೆಗೆ ಕೀಳರಿಮೆಯಿರುತ್ತದೆ. ದೇಹದ ಗಾತ್ರ (ದಪ್ಪ, ತೆಳು) ಮತ್ತು ಅಂಗಾಂಗಗಳ ಅಳತೆ ಆಕಾರ ಮುಂತಾದವುಗಳ ಬಗೆಗೆ ಹಿಂಜರಿಕೆ ಇಟ್ಟುಕೊಂಡಿರುವವರು ಸಂಗಾತಿಯ ಎದುರು ಸಹಜವಾಗಿ ನಗ್ನರಾಗುವುದಿಲ್ಲ. ಇಂತವರ ನಡುವಿನ ಕೂಟ ಮುಕ್ತತೆಯ ಕೊರತೆಯಿಂದಾಗಿ ಸತ್ವಹೀನವಾಗುತ್ತದೆ.

ಎಲ್ಲರ ದೇಹಕ್ಕೂ ತನ್ನದೇ ಆದ ಆಕಾರ ವೈಶಿಷ್ಟ್ಯವಿರುತ್ತದೆ. ಸೌಂದರ್ಯಸಾಧನಗಳಿಗೆ ಮಾರುಕಟ್ಟೆಯನ್ನು ಸೃಷ್ಟಿಮಾಡಿಕೊಳ್ಳಲು

